ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ – ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ನೀರಿನ ನಿರ್ವಹಣೆಯಲ್ಲಿ ಸಾಧನೆ ತೋರಿ ರಾಷ್ಟ್ರಪತಿಯವರಿಂದ ಪ್ರಶಸ್ತಿ ಪಡೆದ ಗೀತಾಬಾಯಿ



ಅತ್ಯಮೂಲ್ಯ ಸಂಪತ್ತಾದ ನೀರಿನ ನಿರ್ವಹಣೆ ಮತ್ತು ಸಮುದಾಯ ಇಂಗು ಗುಂಡಿ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸಿದ ಹಿನ್ನೆಲೆಯಲ್ಲಿ ಬೀದರ್ ಜಿಲ್ಲೆ ಔರಾದ್ ತಾಲ್ಲೂಕಿನ ಧೂಪತ ಮಹಾಗಾಂವ್ ಗ್ರಾಮ ಪಂಚಾಯಿತಿ ಸದಸ್ಯೆ ಗೀತಾಬಾಯಿ ಪವಾರ್ ರಾಷ್ಟ್ರಮಟ್ಟದ 'ಸ್ವಚ್ಛ ಸುಜಲ್ ಶಕ್ತಿ ಸಮ್ಮಾನ್ 2023' ಪ್ರಶಸ್ತಿಗೆ ಆಯ್ಕೆಯಾಗುವ ಮೂಲಕ ಗಡಿ ಜಿಲ್ಲೆಯ ಕೀರ್ತಿ ಪತಾಕೆಯನ್ನು ರಾಷ್ಟ್ರಮಟ್ಟದಲ್ಲಿ ಹಾರಿಸಿದ್ದಾರೆ.

ಕೇಂದ್ರ ಜಲಶಕ್ತಿ ಸಚಿವಾಲಯ ಮತ್ತು ರಾಜ್ಯ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಸಹಯೋಗದಲ್ಲಿ ತಾಲ್ಲೂಕಿನ ಧೂಪತ ಮಹಾಗಾಂವ್‌ನಲ್ಲಿ ಸುಮಾರು 125ಕ್ಕೂ ಹೆಚ್ಚು ಕಡೆ ಮಳೆ ನೀರು ಮತ್ತು ಬೂದು ನೀರು ಇಂಗು ಗುಂಡಿ ನಿರ್ಮಿಸುವಲ್ಲಿ ಸದಸ್ಯೆ ಗೀತಾಬಾಯಿ ಪ್ರಮುಖ ಪಾತ್ರ ವಹಿಸಿದ್ದಾರೆ.

ಗ್ರಾಮದ ಜನರಿಗೆ ನೀರಿನ ಮಹತ್ವದ ಮನವರಿಕೆ ಮಾಡಿಸಿ ಇಂಗು ಗುಂಡಿ ನಿರ್ಮಿಸಿಕೊಳ್ಳುವಂತೆ ಜಾಗೃತಿ ಮೂಡಿಸಿದ್ದಾರೆ. ಅಲ್ಲದೆ ಸ್ವತಃ ತಾವೂ ಸಹ ಒಂದು ಇಂಗುಗುಂಡಿ ನಿರ್ಮಿಸಿಕೊಂಡು ಇತರರಿಗೂ ಪ್ರೋತ್ಸಾಹ ನೀಡಿ ಮಾದರಿಯಾಗಿ ಹೊರ ಹೊಮ್ಮಿದ್ದಾರೆ.

ಮಹಿಳಾ ಸದಸ್ಯೆಯೊಬ್ಬರು ಅಂತರ್ಜಲ ಮಟ್ಟ ಹೆಚ್ಚಳಕ್ಕೆ ಇಂಗುಗುಂಡಿ ನಿರ್ಮಿಸಿಕೊಂಡಿದ್ದಲ್ಲದೆ ಗ್ರಾಮದ ಇತರರೂ ಇಂಗುಗುಂಡಿ ನಿರ್ಮಾಣ ಮಾಡಿಕೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಕ್ಕೆ ರಾಷ್ಟ್ರಮಟ್ಟದ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಮನೆಯಲ್ಲಿ ನಿತ್ಯವೂ ಪಾತ್ರೆ ತೊಳೆದ, ಬಟ್ಟೆ ಒಗೆದ, ಸ್ನಾನ ಮಾಡಿದ, ಅಡುಗೆ ಮಾಡುವಾಗ ಬಳಸಿದ ಹಾಗೂ ಮನೆಗೆಲಸ ಸೇರಿದಂತೆ ಯಾವುದೇ ಕೆಲಸಕ್ಕೆ ಬಳಸಿದ ನೀರು ವ್ಯರ್ಥವಾಗದಂತೆ ಇಂಗುಗುಂಡಿಯ ಮೂಲಕ ಪುನರ್ ಬಳಕೆಗೆ ಒತ್ತು ನೀಡಿರುವುದು ಇವರ ಸಾಧನೆಯಾಗಿದೆ. ಜೊತೆಗೆ ಮಳೆ ನೀರು, ಚರಂಡಿ ನೀರು ಅನಾವಶ್ಯಕ ಪೋಲಾಗದಂತೆ ಸಮುದಾಯ ಇಂಗುಗುಂಡಿ ನಿರ್ಮಾಣ ಮಾಡಿಕೊಂಡು ಅದರ ಮಹತ್ವವನ್ನು ಸಾರ್ವಜನಿಕರಿಗೆ ತಿಳಿಸಿದ್ದಾರೆ. ತಾವಷ್ಟೇ ಅಲ್ಲದೆ, ಗ್ರಾಮದ ಎಲ್ಲರೂ ನೀರಿನ ಸದ್ಬಳಕೆ ಮಾಡಬೇಕು; ನೀರನ್ನು ಉಳಿಸಬೇಕು ಎಂಬ ಸಂದೇಶವನ್ನು ಸಮುದಾಯದ ಮಟ್ಟದಲ್ಲಿ ಗೀತಾಬಾಯಿ ಸಾರಿದ್ದಾರೆ. ಇಂಗು:ಗುಂಡಿಯನ್ನು ನಿರ್ಮಿಸಿ ಆ ನೀರನ್ನು ಕೃಷಿಗೆ ಬಳಸುವುದಲ್ಲದೆ ಮನೆಯ ಅಂಗಳದಲ್ಲಿ ಕಿಚನ್ ಗಾರ್ಡನ್ ಸಹ ಮಾಡಿಕೊಂಡು ನೀರನ್ನು ಸದುಪಯೋಗ ಮಾಡಿಕೊಳ್ಳಬಹುದು ಎನ್ನುವುದನ್ನು ಇವರು ತೋರಿಸಿದ್ದಾರೆ.





### ಸ್ಯಾನಿಟರಿ ಪ್ಯಾಡ್ ಬಳಕೆಯ ಅರಿವು

ಗ್ರಾಮೀಣ ಪ್ರದೇಶದಲ್ಲಿರುವ ಮಹಿಳೆಯರಿಗೆ ಮತ್ತು ಹೆಣ್ಣುಮಕ್ಕಳಿಗೆ ಋತುಚಕ್ರದ ಸ್ವಚ್ಛತೆಯ ಮಹತ್ವದ ಬಗ್ಗೆ ಅರಿವು ಮೂಡಿಸಿ, ಈ ಅವಧಿಯಲ್ಲಿ ಎಲ್ಲರೂ ಆರೋಗ್ಯಕ್ಕಾಗಿ ಸ್ಯಾನಿಟರಿ ಪ್ಯಾಡ್‌ಗಳನ್ನು ಬಳಸುವಂತೆ ಇವರು ಪ್ರೇರೇಪಿಸಿದ್ದಾರೆ. ಬಳಸಿದ ಸ್ಯಾನಿಟರಿ ಪ್ಯಾಡ್ ಅನ್ನು ಒಣ ಕಸದೊಂದಿಗೆ ಮಿಶ್ರಣ ಮಾಡದೇ ಪ್ರತ್ಯೇಕವಾಗಿ ಕಾಗದದಲ್ಲಿ ಮಡಚಿ x ಎಂದು ಗುರುತು ಚಿಹ್ನೆ ಹಾಕಿ ಸ್ವಚ್ಛ ವಾಹಿನಿಗೆ ವಿಲೇವಾರಿ ಮಾಡಬೇಕು. ಅದನ್ನು ಘಟಕದವರು ಇನ್ಸಿನರೇಟರ್ ಯಂತ್ರಕ್ಕೆ ಹಾಕಿ ವೈಜ್ಞಾನಿಕ ರೀತಿಯಲ್ಲಿ ವಿಲೇವಾರಿ ಮಾಡುತ್ತಾರೆ ಎಂದು ಮಹಿಳೆಯರಲ್ಲಿ ಗೀತಾಬಾಯಿ ಅರಿವು ಮೂಡಿಸಿದ್ದಾರೆ.

ಅತ್ಯಮೂಲ್ಯ ಸಂಪತ್ತಾದ ನೀರಿನ ನಿರ್ವಹಣೆ ಮತ್ತು ಸಮುದಾಯ ಇಂಗು ಗುಂಡಿ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸಿದ ಹಿನ್ನೆಲೆಯಲ್ಲಿ ಬೀದರ್ ಜಿಲ್ಲೆ ಔರಾದ್ ತಾಲ್ಲೂಕಿನ ಧೂಪತ ಮಹಾಗಾಂವ್ ಗ್ರಾಮ ಪಂಚಾಯಿತಿ ಸದಸ್ಯೆ ಗೀತಾಬಾಯಿ ಪವಾರ್ ರಾಷ್ಟ್ರಮಟ್ಟದ 'ಸ್ವಚ್ಛ ಸುಜಲ್ ಶಕ್ತಿ ಸಮ್ಮಾನ್ 2023' ಪ್ರಶಸ್ತಿಗೆ ಆಯ್ಕೆಯಾಗುವ ಮೂಲಕ ಗಡಿ ಜಿಲ್ಲೆಯ ಕೀರ್ತಿ ಪತಾಕೆಯನ್ನು ರಾಷ್ಟ್ರಮಟ್ಟದಲ್ಲಿ ಹಾರಿಸಿದ್ದಾರೆ.

ಕೇಂದ್ರ ಜಲಶಕ್ತಿ ಸಚಿವಾಲಯ ಮತ್ತು ರಾಜ್ಯ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಸಹಯೋಗದಲ್ಲಿ ತಾಲ್ಲೂಕಿನ ಧೂಪತ ಮಹಾಗಾಂವ್‌ನಲ್ಲಿ ಸುಮಾರು 125ಕ್ಕೂ ಹೆಚ್ಚು ಕಡೆ ಮಳೆ ನೀರು ಮತ್ತು ಬೂದು ನೀರು ಇಂಗು ಗುಂಡಿ ನಿರ್ಮಿಸುವಲ್ಲಿ ಸದಸ್ಯೆ ಗೀತಾಬಾಯಿ ಪ್ರಮುಖ ಪಾತ್ರ ವಹಿಸಿದ್ದಾರೆ.




**ನೀರು - ನೈರ್ಮಲ್ಯ ಕುರಿತ ಸಮಸ್ಯೆಗಳಿಗೆ**
**ಪರಿಹಾರ ಸಹಾಯವಾಣಿ 9480985555 ಗೆ ಕರೆ ಮಾಡಿ**